**ದಿನಾಂಕಃ 16.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

7. ದಾವಾ ಸ್ವತ್ತಿನ ಚಕ್ಕುಬಂದಿ ಹೇಳಲು ಬರುತ್ತದೆ. ಪೂರ್ವಕ್ಕೆ ಕುನ್ನೇಗೌಡ ( ನನ್ನ ಚಿಕ್ಕಪ್ಪ), ಪಶ್ಚಿಮಕ್ಕೆ ಸರ್ಕಾರಿ ದೇವಸ್ಥಾನದ ಕೊಡುಗೆ, ಉತ್ತರಕ್ಕೆ ಕುನ್ನೇಗೌಡರ ಮಗ ಕೃಷ್ಣ ಹಾಗೂ ಶಿವ ಹಾಗೂ ದಕ್ಷಿಣಕ್ಕೆ ಇದೇ ಸ್ವತ್ತಿನ ಪೈಕಿ ಪಡ ರೇಸ್ಟೋರ್ ಆಗದೇ ಸ್ವಾಮಿ ರವರ ಸ್ವತ್ತು ಇರುತ್ತದೆ. ದಾವಾ ಸ್ವತ್ತಿನಲ್ಲಿ ವಾದಿಯು ತೋರಿಸಿರುವ ಚಕ್ಕುಬಂದಿಯ ಸಂಬಂಧ ನನ್ನ ಪ್ರತಿವಾದ ಪತ್ರದಲ್ಲಿ ನಾನು ಯಾವುದೇ ತಕರಾರು ಮಾಡಿರುವುದಿಲ್ಲ ಎಂದರೆ ಸರಿ. ವಾದಿ ಹೇಳಿರುವ ಚಕ್ಕುಬಂದಿಗೂ ನಾನು ಈ ದಿನ ಹೇಳುತ್ತಿರುವ ಚಕ್ಕುಬಂದಿಗೂ ತಾಳೆಯಾಗುತ್ತಿಲ್ಲ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತಿನ ಪರಿಚಯ ಇರುವುದಿಲ್ಲ ಆದ್ದರಿಂದ ಸುಳ್ಳು ಚಕ್ಕುಬಂದಿಯನ್ನು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಹೇಳಿದಂತೆ ನನ್ನ ಚಿಕ್ಕಪ್ಪ ಆಜುಪಾಜಿನಲ್ಲಿ ಇರುವುದಿಲ್ಲ ವಾದಿಯು ಈಗಾಗಲೇ ಸ್ವತ್ತಿನ ಆಜುಪಾಜುದಾರರನ್ನು ಸಾಕ್ಷಿಗಳಾಗಿ ಮಾಡಿರುತ್ತಾರೆಂದರೆ ಸಾಕ್ಷಿಯು ಅವರುಗಳೇ ಇವರು ಎಂದು ನುಡಿಯುತ್ತಾರೆ.

8. ನಾನು ನನ್ನ ಚಿಕ್ಕಪ್ಪನವರು ದಾವಾ ಸ್ವತ್ತಿನಲ್ಲಿ ಬೋರ್ ವೆಲ್ ಹಾಕಿಸಿರುವುದಾಗಿ ಹೇಳಿದ್ದು ಈ ಸಂಬಂಧ ರಶೀದಿ ಅಥವಾ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಅದನ್ನು ಹಾಜರು ಪಡಿಸುವಲ್ಲಿ ನನಗೆ ಯಾವುದೇ ಆಡಚಣೆ ಇರುವುದಿಲ್ಲ. ದಾವಾ ಸ್ವತ್ತಿನಲ್ಲಿ ನಾನಾಗಲೀ ನನ್ನ ಚಿಕ್ಕಪ್ಪನಾಗಲೀ ಯಾವುದೇ ಬೋರ್ ವೆಲ್ ಹಾಕಿಸಿರುವುದಿಲ್ಲ ಅದು ವಾದಿಯೇ ಹಾಕಿಸಿರುತ್ತಾರೆಂದರೆ ಸರಿಯಲ್ಲ.

9. ಎಂ ಆರ್ 1/2001-02 ಇದನ್ನು ನಾನು ಸಿವಿಲ್ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುತ್ತೇನಾ ಎಂದರೆ ಸಾಕ್ಷಿಯು ನಾನು ಅದನ್ನು ಸಿವಿಲ್ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುತ್ತೇನೆಂದು ನುಡಿಯುತ್ತಾರೆ. ಸದರಿ ಪ್ರಕರಣದ ಸಂಖ್ಯೆ ಹಾಗೂ ನ್ಯಾಯಾಲಯದ ಆದೇಶದ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಾನು ಈ ಸಂಬಂಧ ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡದೇ ಇದ್ದರೂ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ಅದೇ ರೀತಿ ಈ ಸಂಬಂಧ ಯಾವುದೇ ದಾಖಲಾತಿಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

10. ಹಿಂದಿನಿಂದಲೂ ನಮಗೂ ಹಾಗೂ ವಾದಿಯ ಕುಟುಂಬಕ್ಕೂ ಮನಸ್ತಾಪ ಇತ್ತು ಎಂದರೆ ಸರಿಯಲ್ಲ. ಆದ್ದರಿಂದ ಅವರಿಗೆ ಮೋಸ ಮಾಡುವ ಉದ್ದೇಶದಿಂದ ಅಕ್ರಮವಾಗಿ ಖಾತೆ ಪಡೆದಿದ್ದೇನೆಂದರೆ ಸರಿಯಲ್ಲ. ಎಸಿ ನ್ಯಾಯಾಲಯದಲ್ಲಿ ಖಾತೆ ಮಾಡಿಸಿಕೊಳ್ಳುವ ಸಂಬಂಧ ಆದೇಶವಾಗಿರುವ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಈ ರೀತಿ ಯಾವುದೇ ಆದೇಶ ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ವಾದಿಗಳ ಪಿತ್ರಾರ್ಜಿತ ಸ್ವತ್ತಾಗಿದ್ದು ಅವರೇ ಹಿಂದಿನಿಂದ ಸ್ವಾಧೀನದಲ್ಲಿ ಇದ್ದಾರೆಂದರೆ ಸರಿಯಲ್ಲ. ಪಡ ರೆಸ್ಟೋರೇಷನ್ ಕೂಡ ವಾದಿಗಳ ಹೆಸರಿಗೆ ಆಗಿರುತ್ತದೆ ನಾನು ಯಾವುದೇ ಶುಲ್ಕ ಕಟ್ಟಿಲ್ಲ ಎಂದರೆ ಸಾಕ್ಷಿಯು ನನ್ನ ದೊಡ್ಡಪ್ಪ ಹಾಗೂ ಚಿಕ್ಕಪ್ಪಂದಿರು ಸೇರಿ ಕಟ್ಟಿರುತ್ತಾರೆಂದು ನುಡಿಯುತ್ತಾರೆ. ಓ ಎಸ್ 83/2004 ಇದರಲ್ಲಿ 1ನೇ ವಾದಿಯು ಹುಷಾರಿಲ್ಲದ ಕಾರಣ ಹಾಜರಾಗದೇ ಇದ್ದ ಮೇರೆಗೆ ವಜಾ ಆಗಿದ್ದು ಸದರಿ ಆದೇಶದ ಪ್ರತಿಯ ಮೇಲೆ ನಾನು ಖಾತೆ ಮಾಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನ್ಯಾಯಾಲಯದ ಆದೇಶದ ಪ್ರಕಾರವೇ ನಾನು ಖಾತೆ ಮಾಡಿಕೊಂಡಿರುತ್ತೇನೆಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಯು ನನ್ನ ಹೆಸರಿನಲ್ಲಿ ಆಗಲೀ ನನ್ನ ಪೂರ್ವಜರ ಹೆಸರಿನಲ್ಲಿ ಆಗಲೀ ಅಥವಾ ನನ್ನ ವಾರಸುದಾರರ ಹೆಸರಿನಲ್ಲಿ ಇರುವುದಾಗಿ ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ಎಂದಿಗೂ ಸ್ವಾಧೀನದಲ್ಲಿರುವುದಿಲ್ಲ ಹಾಗೂ ಯಾವುದೇ ಹಕ್ಕು ಪಡೆದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**